**ಜಿ.ವಿ. ಪ್ರಭು**



ರಾಷ್ಟ್ರೀಯ ಹೆದ್ದಾರಿ–4, ಬೆಂಗಳೂರಿನಿಂದ 30 ಕಿ.ಮೀ. ದೂರದಲ್ಲಿರುವ ದಾಬಸ್‌ಪೇಟೆ ಕ್ರಾಸ್ ಬಳಿ ಇದ್ದ ಐಸ್‌ಕ್ರೀಂ ಪಾರ್ಲರ್ ಎದುರು ಬಂದು ನಿಂತಿತು ಅವರ ಸ್ಯಾಂಟ್ರೊ ಕಾರು. ಸಮಯ, ಮಧ್ಯಾಹ್ನ 3 ಗಂಟೆ. ಕಾರಲ್ಲಿ ಒಬ್ಬ ಯುವಕ, ಓರ್ವ ಯುವತಿ ಮಾತ್ರ ಇದ್ದಾರೆ. ಕಾರಲ್ಲಿದ್ದ ಯುವಕ, ಯುವತಿಯನ್ನು ಏನೋ ಅಂದು ಛೇಡಿಸಿದ. ಯುವತಿ ನಕ್ಕಳು. ಯುವಕ ಕಾರಿಂದಿಳಿದವನೇ ರಸ್ತೆ ದಾಟಿ ಬಂದ. ಆ ಕಡೆಗೆ ಕುತೂಹಲದಿಂದ ನೋಡುತ್ತಿದ್ದ ಐಸ್‌ಕ್ರೀಂ ಪಾರ್ಲರ್ ಮಾಲೀಕ ಫಯಾಜ್ ಅವನತ್ತ ನೋಡಿ ನಕ್ಕ.

'ಐಸ್‌ಕ್ರೀಂ ಬೇಕಾಗಿತ್ತು.'

'ಇಲ್ಲೇ ತಿನ್ತಿರಾ? ತಗೊಂಡು ಹೋಗ್ತಿರಾ?'

'ಇಲ್ಲೇ ಕಾರಲ್ಲಿ ಕುಳಿತು ತಿನ್ತೀವಿ, ಎರಡು ಕಪ್ ಐಸ್‌ಕ್ರೀಂ ಕೊಡಿ' ಎಂದ ಯುವಕ.

ಫಯಾಸ್ ಐಸ್‌ಕ್ರೀಂ ಕೊಡಲು ಹಿಂತಿರುಗಿದ. ಆ ಕ್ಷಣ ಮಾತ್ರದಲ್ಲೇ ನಡೆದ ಘಟನೆ ಯಾರಿಗೂ ಅರ್ಥವಾಗಲಿಲ್ಲ!

ಇದಕ್ಕಿದ್ದಂತೆ ಕಾರಿನಿಂದ ಭಾರಿ ಶಬ್ದ ಕೇಳಿ ಬಂತು. 'ಫಟ್!' ಎಂಬ ಸದ್ದಿನೊಂದಿಗೆ ಯುವತಿ ಬೆಂಕಿಯ ಜ್ವಾಲೆಯಲ್ಲಿ ಮುಳುಗಿ ಹೋಗಿದ್ದಳು.

ಶಬ್ದ ಕೇಳಿದ ಯುವಕ ಅತ್ತ ದಿಟ್ಟಿಸಿ, 'ಅಖಿಲಾ!' ಎಂದು ಗಟ್ಟಿಯಾಗಿ ಅರುಚುತ್ತಾ ಅತ್ತ ಓಡಿದ. ಜನರ ಗುಂಪು ಕಾರ್ ಬಳಿ ಜಮಾಯಿಸಿತು.

ಕಾರೆಲ್ಲಾ ಮಾಮೂಲಾಗೇ ಇದೆ. ಆದರೆ, ಯುವತಿ ಮಾತ್ರ ಬೆಂಕಿಯಲ್ಲಿದ್ದಾಳೆ. ಅವಳ ದೇಹದ ಮೇಲ್ಭಾಗ ಮಾತ್ರ ಉರಿಯುತ್ತಿದೆ.

ಜನರ ಸಹಾಯದಿಂದ ಬೆಂಕಿ ಹತ್ತಿಕೊಂಡಿದ್ದ ಯುವತಿಯನ್ನು ಕಾರಿಂದ ಹೊರಕ್ಕೆಳೆದ ಯುವಕ. ಅಷ್ಟೊತ್ತಿಗಾಗಲೆ ಅವಳ ದೇಹ, ಮುಖ, ತಲೆ ಭಾಗ ಉರಿದು ಕರಕಲಾಗಿತ್ತು. ದೇಹದ ತಳಭಾಗ, ಕಾಲು, ಕೈಗಳಿಗೆ ಸ್ವಲ್ಪವೂ ಬೆಂಕಿ ಸೋಕಿರಲಿಲ್ಲ. ನೋಡುತ್ತಿದ್ದರೆ ಯುವತಿ ಹಠಾತ್ತಾಗಿ ಬೆಂಕಿಯಲ್ಲಿ ಸಿಕ್ಕಿ ಸುಟ್ಟಂತಿತ್ತು.

ಸ್ವಲ್ಪ ಸಮಯದಲ್ಲೇ ಸೈರನ್ ಮಾಡುತ್ತಾ ಅಲ್ಲಿಗೆ ಆಂಬ್ಯುಲೆನ್ಸ್ ಬಂದಿತ್ತು.

★★★

'ಯುವತಿಗೆ ಬೆಂಕಿ ಹೇಗೆ ಅಂಟಿಕೊಂಡಿತ್ತೋ ಯಾರಿಗೂ ತಿಳಿಯದಾಗಿತ್ತು. ಇನ್ನೂ ಗಮ್ಮತ್ತು ಏನಪ್ಪಾ ಅಂದರೆ, ಕಾರಿನ ಮುಂಭಾಗದಲ್ಲಿ ಯುವತಿ ಯುವಕ ಕುಳಿತಿದ್ದ ಆಸನಗಳನ್ನು ಬಿಟ್ಟು ಬೇರೆಲ್ಲೂ ಸುಟ್ಟಿಲ್ಲ. ಅಷ್ಟೇ ಅಲ್ಲ, ಯುವತಿಯ ಕಾಲು, ಕೈಗಳಿಗೂ ಬೆಂಕಿ ಅಂಟಿಕೊಂಡಿಲ್ಲ. ಆಕೆ ಚೂಡೀದಾರ್ ಸಹ ಕೆಳಭಾಗದಲ್ಲಿ ಸುಟ್ಟಿಲ್ಲ' ಎಂದು ವಿವರಿಸುತ್ತಿದ್ದರು ಇನ್‌ಸ್ಪೆಕ್ಟರ್ ವಿಜಯ್.

ಅವರು ಹೇಳುತ್ತಿದ್ದುದನ್ನು ಸುಮ್ಮನೆ ಕೇಳುತ್ತಾ ಫೋಟೊಗಳನ್ನು ನೋಡುತ್ತಿದ್ದ ಖಾಸಗಿ